**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ:- 105/2025**

| | | |
|---|---|---|
| **ಸಾಕ್ಷಿದಾರನ ಹೆಸರು** | : ತಹಸಿನಾ ಬಾನು | **ಪಿ.ಡಬ್ಲ್ಯೂ:-7** |
| **ತಂದೆಯ ಹೆಸರು** | : ಲೇಟ್ ವಸೀಮ್ | **ಸಿ.ಡಬ್ಲ್ಯೂ:- 11** |
| **ವಯಸ್ಸು** | : 33 ವರ್ಷ | |
| **ಉದ್ಯೋಗ** | : ಸ್ವಾಗತ ಕಾರಿಣಿ ಕೆಲಸ, ಸನ್ ಲೀಪ್ ಹೋಟೆಲ್, ಮೈಸೂರು | |
| **ವಾಸಸ್ಥಳ** | : ಸಾತಗಳ್ಳಿ, ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿ:25.06.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

**1.** ನಾನು ಸಾತಗಳ್ಳಿಯಲ್ಲಿ ವಾಸವಿದ್ದೇನೆ. ಚಾ.ಸಾ:1 ಶಹೀನ್ ತಾಜ್ ನನ್ನ ತಂದೆಯ ಅಕ್ಕ ಇರುತ್ತಾರೆ. ಚಾ.ಸಾ:1 ರವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು. ಅವರೆಂದರೆ ಮುದಾಸಿರ್, ತನ್ವಿರ್ ಅಹಮದ್, ಮುದಾಹಿರ್ ಮತ್ತು ಮಗಳು ಪರ್ವೀನ್ ತಾಜ್ ಇರುತ್ತಾರೆ.

**2.** ನಾನು ದಿನಾಲೂ ಬೆಳಿಗ್ಗೆ 9 ಗಂಟೆಗೆ ನನ್ನ ಕೆಲಸಕ್ಕೆ ಹೋಗಿ ಸಂಜೆ 7.30 ಮನೆಗೆ ವಾಪಸ್ಸು ಬರುತ್ತೇನೆ. 2024 ನೇ ವರ್ಷದಲ್ಲಿ ಒಂದು ದಿನ ಬೆಳಿಗ್ಗೆ 8 ಗಂಟೆಗೆ ನನ್ನ ತಂದೆಗೆ ಯಾರೋ ಫೋನ್ ಮಾಡಿ ನಿನ್ನ ತಂಗಿಯ ಮಗನ ಮರ್ಡರ್ ಆಗಿದೆ ಎಂದು ಹೇಳಿದ್ದರು. ಆ ಕಾಲಕ್ಕೆ ನಾನು, ನನ್ನ ತಂದೆ-ತಾಯಿ ಸಮುದಾಯ ಭವನದ ಬಳಿ ಹೋಗಿದ್ದೆವು.

ನಾವು ಹೋಗುವಷ್ಟರಲ್ಲಿ ಪೊಲೀಸರು ಅಲ್ಲಿಗೆ ಬಂದಿದ್ದರು. ಆ ಕಾಲಕ್ಕೆ ಅಲ್ಲಿ ಒಬ್ಬ ವ್ಯಕ್ತಿಯನ್ನು ಸಾರ್ವಜನಿಕರು ಹೊಡೆದು ಕೂರಿಸಿದ್ದರು. ಆ ಕಾಲಕ್ಕೆ ಮುದಾಸಿರ್ ನ ಮೃತದೇಹ ಸಮುದಾಯ ಭವನದ ಮುಂಭಾಗದಲ್ಲಿ ಬಿದ್ದಿತ್ತು. ಆದರೆ ಪೊಲೀಸರು ಹತ್ತಿರಕ್ಕೆ ಬಿಡಿಲಿಲ್ಲವಾದ್ದರಿಂದ ಮುದಾಸಿರ್ ನ ದೇಹದ ಎಲ್ಲೆಲ್ಲಿ ಗಾಯಗಳಾಗಿದ್ದವು ಎಂದು ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಪೊಲೀಸರು ಶವವನ್ನು ಆಸ್ಪತ್ರೆಗೆ ಸಾಗಿಸಿ ನಂತರ ನನ್ನನ್ನು ಮತ್ತು ನನ್ನ ತಂದೆ–ತಾಯಿಯನ್ನು ಕರೆಸಿದ್ದರು ಮತ್ತು ಅಲ್ಲಿ ಕೂರಿಸಿದ್ದ ವ್ಯಕ್ತಿಯನ್ನು ಸಹ ಕರೆದುಕೊಂಡು ಹೋಗಿದ್ದರು.

**3.** ಯಾರೋ ಕಲ್ಲು ಹಾಕಿ ಸಾಯಿಸಿದ್ದಾರೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದರು. ಆ ಕಾಲಕ್ಕೆ ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ. ಚಾ.ಸಾಃ1 ರವರಿಗೆ ಕನ್ನಡ ಸರಿಯಾಗಿ ಬರುವುದಿಲ್ಲವಾದ್ದರಿಂದ ಅವರು ಹೇಳಿದ್ದನ್ನು ನಾನು ಕನ್ನಡಕ್ಕೆ ಬಾಷಾಂತರಿಸಿ ಪೊಲೀಸರಿಗೆ ಹೇಳಿದ್ದೆ.

**4.** ಆ ದಿನ ಸಾರ್ವಜನಿಕರನ್ನು ಹೊಡೆದು ಕೂರಿಸಿದ ವ್ಯಕ್ತಿಯನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ಕೋರ್ಟ್ ಮುಂದಿರುವ ಆರೋಪಿ ಆ ದಿನ ಅಲ್ಲಿ ಕೂರಿಸಿದ್ದ ವ್ಯಕ್ತಿ ಇರುತ್ತಾನೋ ಇಲ್ಲವೋ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**5.** ನನಗೆ ದಿನಾಲೂ ಬೆಳಿಗ್ಗೆ ವಾಕಿಂಗ್ ಹೋಗುವ ಅಬ್ಯಾಸ ಇದೆ ಎಂದರೆ ಸರಿಯಲ್ಲ. ದಿಃ- 07.12.2024 ರಂದು ಬೆಳಿಗ್ಗೆ ನಾನು ಕಲ್ಯಾಣಗಿರಿ ಕಡೆಗೆ ವಾಕಿಂಗ್ ಹೋಗುವಾಗ ಅಲ್ಲಿ ಜನ ಸೇರಿದ್ದನ್ನು ನೋಡಿ ಹೋಗಿ ನೋಡಿದಾಗ ಅಲ್ಲಿ ಮುದಾಸಿರ್ ಪಾಷನು ಮಲಗಿದ್ದು, ತಲೆ ಮತ್ತು ಮುಖದಿಂದ ರಕ್ತ ಹರಿದಿತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ಪಕ್ಕದಲ್ಲೇ ಒಬ್ಬ ವ್ಯಕ್ತಿ ಕುಳಿತ್ತಿದ್ದು, ಅವನ ತುಟಿಯ ಮೇಲೆ ರಕ್ತ ಬರುತ್ತಿತ್ತು ಎಂದರೆ ನಾನು ನೋಡಿಲ್ಲ. ಅಲ್ಲಿ ಕುಳಿತಿದ್ದ ವ್ಯಕ್ತಿಯೇ ಮುದಾಸಿರ್ ಪಾಷನ ಮೇಲೆ ಸಿಮೆಂಟ್ ಇಟ್ಟಿಗೆಯನ್ನು ಎತ್ತಿ ಹಾಕಿ ಸಾಯಿಸಿರುವುದಾಗಿ ಮಾತನಾಡುತ್ತಿದ್ದರು ಎಂದರೆ ನಿಜ. ನಾನು ತಕ್ಷಣ ಮುದಾಸಿರ್ ರವರ ಮನೆಗೆ ಹೋಗಿ ಅವರ ತಾಯಿಗೆ ತಿಳಿಸಿದ್ದೆ ಎಂದರೆ ಸರಿಯಲ್ಲ.

**6.** ನಂತರ ನಾನು, ಶಹೀನ್ ತಾಜ್ ಮತ್ತು ಸೈಯ್ಯದ್ ತನ್ವಿರ್ ಆ ಸ್ಥಳಕ್ಕೆ ಹೋಗಿದ್ದೆವು ಎಂದರೆ ಸರಿಯಲ್ಲ. ಆ ಕಾಲಕ್ಕೆ ತನ್ವಿರನು ಅಲ್ಲಿದ್ದ ವ್ಯಕ್ತಿಯನ್ನು ಕಟ್ಟಿ ಹಾಕಿ ಪೊಲೀಸರಿಗೆ ಪೋನ್ ಮಾಡಿದ್ದ ಎಂದರೆ ಸರಿಯಲ್ಲ. ಆ ವ್ಯಕ್ತಿಯ ಹೆಸರು ರಿಜ್ವಾನ್ ಖಾನ್ ಮತ್ತು 100 ರೂ. ಹಣದ ವಿಷಯಕ್ಕೆ ಮತ್ತು ಸೆಲ್ಯೂಷನ್ ಸೇದಲು ಕೊಡಲಿಲ್ಲ ಎಂಬುವ ವಿಚಾರಕ್ಕೆ ಜಗಳವಾಗಿ ರಿಜ್ವಾನ್ ಖಾನ್ ಮುದಾಸಿರ್ ಮಲಗಿದ ಮೇಲೆ ಸಿಮೆಂಟ್ ಇಟ್ಟಿಗೆಯನ್ನು ತಲೆ ಮತ್ತು ಕಾಲ ಮೇಲೆ ಎತ್ತಿ ಹಾಕಿ ಸಾಯಿಸಿರುವ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-20 ಎಂದು ಗುರುತಿಸಿದೆ.

**7.** ಕೋರ್ಟ್ ಮುಂದಿರುವ ಆರೋಪಿಯೇ ಆ ದಿನ ತನ್ವಿರ್ ಕಟ್ಟಿ ಹಾಕಿದ್ದ ವ್ಯಕ್ತಿ ಇರುತ್ತಾನೆ ಎಂದರೆ ನಾನು ನೋಡಿಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಜ್ಯೋತಿ ವಕೀಲರಿಂದಃ–**

**8.** ಆ ದಿನ ನನ್ನ ತಂದೆಗೆ ಫೋನ್ ಬಂದ ಬಳಿಕ ಬೆಳಿಗ್ಗೆ 8 ಗಂಟೆಗೆ ಸಮುದಾಯ ಭವನದ ಬಳಿ ಹೋಗಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹೋದಾಗ ಅಲ್ಲಿ ಒಬ್ಬ ವ್ಯಕ್ತಿಯನ್ನು ಹಿಡಿದು ಕೂರಿಸಿದದ್ದರು ಮತ್ತು ಆ ವ್ಯಕ್ತಿ ಮುದಾಸಿರ್ ನನ್ನು ಕಲ್ಲಿನಿಂದ ಎತ್ತಿಹಾಕಿ ಸಾಯಿಸಿದ್ದಾನೆ ಎಂದು ಮಾತನಾಡಿಕೊಳ್ಳುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಇದೇ ಮೊದಲ ಬಾರಿಗೆ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯವನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**